बैंक ऑफ़ बड़ौदा

**Bank of Baroda**

India's International Bank

www.bankofbaroda.com

ಕಾರ್ಪೊರೇಟ್ ಆಫೀಸ್ : ಬರೋಡಾ ಕಾರ್ಪೊರೇಟ್ ಸೆಂಟರ್, ಸಿ–26, 'ಜಿ' ಬ್ಲಾಕ್, ಬಾಂದ್ರಾ–ಕುರ್ಲಾ ಕಾಂಪ್ಲೆಕ್ಸ್, ಬಾಂದ್ರಾ (ಪೂರ್ವ), ಮುಂಬಯಿ 400 051

# ರೆಕಾರ್ಡ್ ದಿನಾಂಕದ ಬಗ್ಗೆ ನೋಟೀಸ್

## ಬ್ಯಾಂಕ್ ಆಫ್ ಬರೋಡಾದಲ್ಲಿ ವಿಜಯಾ ಬ್ಯಾಂಕ್ ಮತ್ತು ದೇನಾ ಬ್ಯಾಂಕ್‌ನ ಏಕೀಕರಣ

ಇದು ಬ್ಯಾಂಕಿಂಗ್ ಕಂಪನೀಸ್ ಕಾಯಿದೆ, 1970/1980ರ ಸೆಕ್ಷನ್ 9ರ (ಅಂಡರ್‌ಟೇಕಿಂಗ್‌ಗಳ ಸ್ವಾಧೀನತೆ ಮತ್ತು ವರ್ಗಾವಣೆ) ಅಂತರ್ಗತ, ಜನವರಿ 2, 2019ರಂದು ಭಾರತ ಸರಕಾರ ಸೂಚಿಸಿರುವ, ಬ್ಯಾಂಕ್ ಆಫ್ ಬರೋಡಾ ಸ್ಕೀಮ್, 2019 ('ಸ್ಕೀಮ್')ರಲ್ಲಿ ವಿಜಯಾ ಬ್ಯಾಂಕ್ ಮತ್ತು ದೇನಾ ಬ್ಯಾಂಕ್‌ನ ಏಕೀಕರಣಕ್ಕೆ ಸಂಬಂಧಪಟ್ಟಿದೆ.

ಈ ಮೂಲಕ ನೋಟೀಸ್ ನೀಡುವುದೇನೆಂದರೆ, ಫೆಬ್ರವರಿ 20, 2019ರಂದು ನಡೆದ ಬ್ಯಾಂಕ್ ಆಫ್ ಬರೋಡಾದ ಬೋರ್ಡ್ ಆಫ್ ಡೈರೆಕ್ಟರ್ಸ್ ಮೀಟಿಂಗ್‌ನಲ್ಲಿ, ಸ್ಕೀಮ್‌ಗೆ ಅನುಸಾರವಾಗಿ ಬ್ಯಾಂಕ್ ಆಫ್ ಬರೋಡಾದ (ವರ್ಗಾವಣೆ ಮಾಡುವ ಬ್ಯಾಂಕ್) ಇಕ್ವಿಟಿ ಶೇರುಗಳನ್ನು **ವಿಜಯಾ ಬ್ಯಾಂಕ್ ಮತ್ತು ದೇನಾ ಬ್ಯಾಂಕಿನ (ವರ್ಗಾವಣೆ ಪಡೆಯುವ ಬ್ಯಾಂಕ್‌ಗಳು) ಶೇರುದಾರರಿಗೆ ಜಾರಿಗೊಳಿಸಲು ಹಾಗೂ ಹಂಚಲು ಸೋಮವಾರ, ಮಾರ್ಚ್ 11, 2019ರಂದು ರೆಕಾರ್ಡ್ ದಿನಾಂಕವೆಂದು ನಿರ್ಧರಿಸಿದ್ದು**, ಶೇರು ವಿನಿಮಯ ಅನುಪಾತ ಈ ಕೆಳಗಿನಂತಿರುವುದು:

1. ವಿಜಯಾ ಬ್ಯಾಂಕಿನ ತಲಾ ರೂ. 10/–ರ –1000– ಇಕ್ವಿಟಿ ಶೇರುಗಳಿಗೆ ಪ್ರತಿಯಾಗಿ ಬ್ಯಾಂಕ್ ಆಫ್ ಬರೋಡಾದ ತಲಾ ರೂ. 2/–ರ –402– ಇಕ್ವಿಟಿ ಶೇರುಗಳು.

2. ದೇನಾ ಬ್ಯಾಂಕಿನ ತಲಾ ರೂ. 10/–ರ –1000– ಇಕ್ವಿಟಿ ಶೇರುಗಳಿಗೆ ಪ್ರತಿಯಾಗಿ ಬ್ಯಾಂಕ್ ಆಫ್ ಬರೋಡಾದ ತಲಾ ರೂ. 2/–ರ –110– ಇಕ್ವಿಟಿ ಶೇರುಗಳು.

ಆ ಪ್ರಕಾರವಾಗಿ, ರೆಕಾರ್ಡ್ ದಿನಾಂಕದಂದು ಇರುವಂತೆ, ವರ್ಗಾವಣೆ ಪಡೆಯುವ ಆಯಾ ಬ್ಯಾಂಕ್‌ಗಳಲ್ಲಿನ ಶೇರುದಾರರ ರಿಜಿಸ್ಟರ್/ರಿಜಿಸ್ಟರ್ ಆಫ್ ಬೆನಿಫಿಶಿಯಲ್ ಓನರ್ಸ್‌ನಲ್ಲಿ ಯಾವ ಶೇರುದಾರರ ಹೆಸರುಗಳಿವೆಯೋ, ಅಂತಹವರು ಮೇಲೆ ಉಲ್ಲೇಖಿಸಿರುವ ಶೇರು ವಿನಿಮಯ ಅನುಪಾತದ ಪ್ರಕಾರ, ವರ್ಗಾವಣೆ ಮಾಡುವ ಬ್ಯಾಂಕಿನ ಇಕ್ವಿಟಿ ಶೇರುಗಳನ್ನು ಪಡೆಯಲು ಅರ್ಹರಾಗಿರುತ್ತಾರೆ.

ವರ್ಗಾವಣೆ ಪಡೆಯುವ ಬ್ಯಾಂಕುಗಳ ಶೇರುದಾರರು, ಅಂದರೆ (ಎ) ತಮ್ಮ ಶೇರುಗಳ ವರ್ಗಾವಣೆ; ಅಥವಾ (ಬಿ) ತಮ್ಮ ನೋಂದಾಯಿತ ವಿಳಾಸ ಬದಲಾವಣೆ ಇತ್ಯಾದಿ ಬಯಸುವವರು ತಮ್ಮ ಕೋರಿಕೆಗಳನ್ನು, ರಿಜಿಸ್ಟ್ರಾರ್ ಮತ್ತು ಟ್ರಾನ್ಸ್‌ಫರ್ ಏಜೆಂಟ್‌ಗೆ (RTA), ಅಂದರೆ ಲಿಂಕ್ ಇನ್‌ಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ಗೆ (ವರ್ಗಾವಣೆ ಪಡೆಯುವ ಬ್ಯಾಂಕ್‌ಗಳ RTA), ರೆಕಾರ್ಡ್ ದಿನಾಂಕದಂದು ಅಥವಾ ಅದಕ್ಕಿಂತ ಮುಂಚೆ ಈ ಕೆಳಗಿನ ವಿಳಾಸಕ್ಕೆ ಕಳುಹಿಸತಕ್ಕದ್ದು:

ಲಿಂಕ್ ಇನ್‌ಟೈಮ್ ಇಂಡಿಯಾ ಪ್ರೈ. ಲಿ.<br>
ಸಿ 101, 247 ಪಾರ್ಕ್,<br>
ಎಲ್.ಬಿ.ಎಸ್. ಮಾರ್ಗ, ವಿಕ್ರೋಲಿ ಪಶ್ಚಿಮ<br>
ಮುಂಬಯಿ – 400 083<br>
ಟೆಲಿಫೋನ್ ನಂ. 022–49186270<br>
ಇಮೇಲ್ ಐಡಿ - rnt.helpdesk@linkintime.co.in

ರೆಕಾರ್ಡ್ ದಿನಾಂಕದ ನಂತರ, ವರ್ಗಾವಣೆ ಪಡೆಯುವ ಬ್ಯಾಂಕ್‌ಗಳ ಇಕ್ವಿಟಿ ಶೇರುಗಳಿಗೆ ಸಂಬಂಧಿಸಿದ ಎಲ್ಲ ಪತ್ರ ವ್ಯವಹಾರಗಳನ್ನು **ವರ್ಗಾವಣೆ ಮಾಡುವ ಬ್ಯಾಂಕಿನ ರಿಜಿಸ್ಟ್ರಾರ್ ಮತ್ತು ಟ್ರಾನ್ಸ್‌ಫರ್ ಏಜೆಂಟ್‌ನೊಂದಿಗೆ ಮಾತ್ರ, ಅಂದರೆ ಕಾರ್ವಿ ಫಿನ್‌ಟೆಕ್ ಪ್ರೈವೇಟ್ ಲಿಮಿಟೆಡ್‌ನೊಂದಿಗೆ, ಅವರ ಈ ಕೆಳಗಿನ ವಿಳಾಸದಲ್ಲಿ ಮಾಡತಕ್ಕದ್ದು:**

ಕಾರ್ವಿ ಫಿನ್‌ಟೆಕ್ ಪ್ರೈವೇಟ್ ಲಿಮಿಟೆಡ್ (ಯುನಿಟ್ : ಬ್ಯಾಂಕ್ ಆಫ್ ಬರೋಡಾ)<br>
ಕಾರ್ವಿ ಸೆಲೆನಿಯಮ್ ಟವರ್ ಬಿ, ಪ್ಲಾಟ್ 31–32, ಗಚಿಬಾವ್ಲಿ<br>
ಫೈನಾನ್ಷಿಯಲ್ ಡಿಸ್ಟ್ರಿಕ್ಟ್, ನಾನಾಕ್ರಮ್‌ಗುಡಾ, ಸೆರಿಲಿನಾಂಪಲ್ಲಿ ಮಂಡಲ್, ಹೈದರಾಬಾದ್ – 500 032<br>
ಟೆಲಿಫೋನ್ : 040 6716 2222 / 18003454001 (ಟೋಲ್ ಫ್ರೀ)<br>
ಇಮೇಲ್: einward.ris@karvy.com

ಸ್ಕೀಮ್‌ನ ಕಲಂ 6(2)(i) ಪ್ರಕಾರ, ವರ್ಗಾವಣೆ ಪಡೆಯುವ ಬ್ಯಾಂಕ್‌ಗಳಲ್ಲಿನ, ಆಂಶಿಕ ಶೇರುಗಳನ್ನು ಪಡೆಯುವ ಅರ್ಹತೆ ಹೊಂದಿರುವ ಶೇರುದಾರರಿಗೆ, ಇಂತಹ ಆಂಶಿಕ ಶೇರುಗಳ ಕಾರಣ ಉದ್ಭವಿಸುವ ಮೊತ್ತವನ್ನು, ಡಿಪಾಜಿಟರಿಗಳು ಒದಗಿಸುವ ಅಂಕಿಅಂಶಗಳ ಪ್ರಕಾರ ಅಥವಾ ವರ್ಗಾವಣೆ ಪಡೆಯುವ ಬ್ಯಾಂಕ್‌ಗಳ RTA ಬಳಿ ನೋಂದಾಯಿಸಿರುವ ಪ್ರಕಾರ, ಅವರ ಬ್ಯಾಂಕ್ ಖಾತೆಗಳಿಗೆ ನೇರ ಕ್ರೆಡಿಟ್ ಮೂಲಕ ಕಳುಹಿಸಲಾಗುವುದು ಅಥವಾ ಅವರ ನೋಂದಾಯಿತ ವಿಳಾಸಕ್ಕೆ ವಾರಂಟ್‌ಗಳನ್ನು ಕಳುಹಿಸಲಾಗುವುದು.

ರೆಕಾರ್ಡ್ ದಿನಾಂಕದ ನಂತರ, ವರ್ಗಾವಣೆ ಪಡೆಯುವ ಬ್ಯಾಂಕ್‌ಗಳ ಇಕ್ವಿಟಿ ಶೇರುಗಳ ಟ್ರೇಡಿಂಗನ್ನು, ಸ್ಟಾಕ್ ಎಕ್ಸ್‌ಚೇಂಜ್‌ಗಳ ನಿಯಮಗಳಿಗೆ ಅನುಸಾರವಾಗಿ, ಬಿಎಸ್‌ಇ ಲಿಮಿಟೆಡ್‌ನಲ್ಲಿ ಮತ್ತು ನ್ಯಾಶನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್‌ನಲ್ಲಿ ಸ್ಥಗಿತಗೊಳಿಸಲಾಗುವುದು.

ರೆಕಾರ್ಡ್ ದಿನಾಂಕದ ನೋಟೀಸ್ ಹಾಗೂ ಸ್ಕೀಮ್, ಬ್ಯಾಂಕಿನ ವೆಬ್‌ಸೈಟ್ ಆಗಿರುವ **www.bankofbaroda.com**ನಲ್ಲಿ, ಬಿಎಸ್‌ಇ ಲಿಮಿಟೆಡ್‌ನಲ್ಲಿ (www.bseindia.com) ಮತ್ತು ನ್ಯಾಶನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್‌ನಲ್ಲಿ (www.nseindia.com) ಕೂಡ ಲಭ್ಯವಿವೆ.

**ಸ್ಥಳ : ಮುಂಬಯಿ**<br>
**ದಿನಾಂಕ : ಫೆಬ್ರವರಿ 22, 2019**

**ಪಿ. ಕೆ. ಅಗರ್‌ವಾಲ್**<br>
**ಕಂಪನಿ ಸೆಕ್ರೆಟರಿ**<br>
**ಬ್ಯಾಂಕ್ ಆಫ್ ಬರೋಡಾ**

88/18-19